**ಕರ್ನಾಟಕ ಸರ್ಕಾರ**
**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ದೇವನಹಳ್ಳಿ**
**ಎಸ್.ಸಿ. ನಂ. 15007/2023**

| | | |
|---|---|---|
| ಹೆಸರು | : | ಅನುರಾಗ್ |
| ತಂದೆ ಹೆಸರು | : | ಹಿರೇಮನಿ ಪಟಾಕ್ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸ | : | ವೈಟ್ ಫೀಲ್ಡ್, ಬೆಂಗಳೂರು |

**PW - 3, CW-5**

(ಇಂದು ದಿನಾಂಕ 13.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆ : ಅಭಿಯೋಜನೆ ಪರ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:**

ನನಗೆ ಚಾಸಾ.6 ಗೊತ್ತು. ಚಾಸಾ.1 ಘಟನೆಯ ಸಮಯದಲ್ಲಿ ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಕೃತ್ಯ ನಡೆದ ಸ್ಥಳ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಸ್ಥಳ ಪಂಚನಾಮೆಯನ್ನು ನಿ.ಪಿ.3, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2022 ರಲ್ಲಿ ಅಮೆಜಾನ್ ಕಂಪನಿಯ ವೇರ್ ಹೌಸ್ ಹತ್ತಿರ ಮಾಡಿರುತ್ತೇನೆ. ಅಲ್ಲಿ ಪೊಲೀಸರು ಬಂದಿದ್ದರು. ಪೊಲೀಸರು ಸ್ಥಳದಿಂದ ಮಣ್ಣು ಮತ್ತು ರಕ್ತಗತವಾದ ಮಣ್ಣನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ಆ ಸಮಯದಲ್ಲಿ ನಿ.ಪಿ.3 ಕ್ಕೆ ಸಹಿ ಮಾಡಿರುತ್ತೇನೆ. ರಕ್ತಗತವಾದ ಮಣ್ಣನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಈಗ ನೋಡುತ್ತಿರುವ ಪೋಟೋಗಳಲ್ಲಿ ನಾನು ಇರುತ್ತೇನೆ. ಅವುಗಳನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು. ಪೊಲೀಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿರುತ್ತಾರೆ.

(ಈ ಸಂದರ್ಭದಲ್ಲಿ ಮಾನ್ಯ ಪಿ.ಪಿ.ಯವರ ವಿನಂತಿ ಮೇರೆಗೆ ಕಡತವನ್ನು ಹಾಗೂ ಸಾಕ್ಷ್ಯವನ್ನು ಪರಿಗಣಿಸಿ, ಈ ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲವೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು : ಮಾನ್ಯ ಪಿ.ಪಿ. ಯವರಿಂದ :</u>**

ಪೊಲೀಸರು ನನ್ನ ಸಮಕ್ಷಮ ಈಗ ನೋಡುತ್ತಿರುವ ರಕ್ತಗತವಾದ ಮಣ್ಣನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಅನ್ನುವುದು ನಿಜ. ಸಾದಾ ಮಣ್ಣು ಮತ್ತು ರಕ್ತಗತವಾದ ಮಣ್ಣನ್ನು ಮು.ಮಾ.3 ಮತ್ತು 4 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : 3 ನೇ ಆರೋಪಿ ಪರ ಶ್ರೀಮತಿ ಸಿಎಂ ವಕೀಲರಿಂದಃ</u>**

ನಾನು ಕಳೆದ 5 ವರ್ಷಗಳಿಂದ ಅಮೆಜಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುತ್ತೇನೆ. ನನಗೆ ಪೊಲೀಸರು ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿರಲಿಲ್ಲ. ನಿ.ಪಿ.3 ರಲ್ಲಿ ಏನು ಬರೆದುಕೊಂಡಿರುತ್ತಾರೆ ಅನ್ನುವುದು ತಿಳಿಸಿರುತ್ತಾರೆ. ಪೊಲೀಸರು ನನಗೆ ನಿ.ಪಿ.3 ರಲ್ಲಿರುವ ವಿಷಯವನ್ನು ತಿಳಿಸಿರುತ್ತಾರೆ. ನನಗೆ ನಿ.ಪಿ.3 ರಲ್ಲಿ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಆ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಅನ್ನುವುದು ಸರಿಯಲ್ಲ. ನನ್ನ ಸಮಕ್ಷಮ ಮು.ಮಾ.3 ಮತ್ತು 4 ನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಅನ್ನುವುದು ಸರಿಯಲ್ಲ.

**<u>ಪಾಟೀ ಸವಾಲು : 1, 2 ಮತ್ತು 4 ರಿಂದ 7 ನೇ ಆರೋಪಿ ಪರ ವಕೀಲರು 3 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.</u>**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿ, ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.

V AD& SJ, B,luru (R)
Devanahalli